**SC 70-24** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 28.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ AAK, ವಕೀಲರಿಂದಃ**

3. ಇಬ್ರಾಹಿಂ ಲೋಧಿ ಯಾರೆಂದು ಗೊತ್ತಿಲ್ಲ. ಇಬ್ರಾಹಿಂ ಲೋಧಿ ರವರ ತಂದೆ ಹೆಸರು ಗೊತ್ತಿಲ್ಲ. ನಾನು ಗುಜರಿ ವ್ಯಾಪಾರ ಮಾಡುತ್ತೇನೆ. ನಾನು ಕಳೆದ 50 ವರ್ಷಗಳಿಂದ ಗುಜರಿ ವ್ಯಾಪಾರ ಮಾಡುತ್ತೇನೆ. ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಪರವಾನಿಗೆ ಪಡೆದಿಲ್ಲ ಹಾಗೂ ಹಾಜರಪಡಿಸಿಲ್ಲ. 50 ವರ್ಷಗಳಿಂದ ದಾವಾ ಆಸ್ತಿಯಲ್ಲಿ ವ್ಯಾಪಾರ ಮಾಡಿಕೊಂಡು ಬಂದಿದ್ದೇನೆ. ವಾದಿ ಹಾಗೂ ಅವರ ತಂದೆ ಗೊತ್ತಿಲ್ಲ. ಮಹಾನಗರ ಪಾಲಿಕೆಯವರು ದಾವಾ ಆಸ್ತಿಯನ್ನು ನನಗೆ ಕಬ್ಜಾ ಕೊಟ್ಟಿದ್ದಾರೆ. 52 ವರ್ಷಗಳ ಹಿಂದೆ ಮಹಾನಗರ ಪಾಲಿಕೆಯವರು ನಮ್ಮ ಅಣ್ಣನಿಗೆ ಕಬ್ಜಾ ಕೊಟ್ಟಿದ್ದಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳಿಲ್ಲ. ಮಹಾನಗರ ಪಾಲಿಕೆಯವರು ಭೂ-ಭಾಡಿಗೆ ಅಂತಾ ಠರಾವು ಪಾಸ ಮಾಡಿ ಕೊಟ್ಟಿದ್ದಾರೆ. ಅದರ ದಾಖಲೆಗಳು ನಮ್ಮ ಬಳಿ ಇವೆ. ಸದರಿ ದಾಖಲೆಗಳನ್ನು ಹಾಜರಪಡಿಸುತ್ತೇನೆ. ನಮ್ಮ ಅಣ್ಣ ಹಾಗೂ ನಾವು ಕೂಡಿ ವ್ಯಾಪಾರ ಮಾಡುತ್ತಿದ್ದೇವೆ. ಈಗ ನಮ್ಮ ಅಣ್ಣ ಮರಣ ಹೊಂದಿದ್ದಾನೆ. ಠರಾವು ನನ್ನ ಅಣ್ಣನ ಹೆಸರಿನಲ್ಲಿ ಆಗಿದಿಯೋ ಅಥವಾ ನನ್ನ ಹೆಸರಿನಲ್ಲಿ ಆಗಿದಿಯೋ ಗೊತ್ತಿಲ್ಲ. ಕರ ತುಂಬಿದ ಬಗ್ಗೆ ನಮ್ಮ ಬಳಿ 50 ವರ್ಷಗಳಿಂದ ದಾಖಲೆಗಳಿವೆ. ಅವುಗಳನ್ನು ಹಾಜರಪಡಿಸಲು ತೊಂದರೆ ಇಲ್ಲ. ರೇಲ್ವೆ ಪೋಲಿಸರು ನನ್ನ ಮೇಲೆ ಎರಡು ಸಿ.ಸಿ. ಕೇಸಗಳನ್ನು ಹಾಕಿದ್ದಾರೆ ಅಂದರೆ ಸರಿ. ಸಾಕ್ಷಿ ಸಿ ಸಿ ರಜಿಸ್ಟರ ಪ್ರತಿ ತೋರಿಸಲಾಗಿ, ಅವುಗಳನ್ನು ಒಪ್ಪಿಕೊಂಡಿದ್ದರಿಂದ ನಿಪಿ.8 ಹಾಗೂ 9 ಎಂದು ಗುರುತಿಸಲಾಯಿತು. ಪೋಲಿಸರು ಆ ಕಾಲಕ್ಕೆ ದಾವಾ ಆಸ್ತಿ ಮಾಲಿಕ ವಾದಿ ಎಂದು ಹೇಳಿಕೆ ಬರೆದುಕೊಂಡು ಹೋಗಿದ್ದಾರೆ ಅಂದರೆ ಗೊತ್ತಿಲ್ಲ. ವಾದಿಯ ತಂದೆಯದು ಎಂ ಜಿ ಮಾರ್ಕೇಟದಲ್ಲಿ ಅಂಗಡಿ ಇತ್ತು ಅಂದರೆ ಗೊತ್ತಿಲ್ಲ. ಸದರಿ ಎಂ ಜಿ ಮಾರ್ಕೇಟದಲ್ಲಿರುವ ಜಾಗವನ್ನು ಮಹಾನಗರ ಪಾಲಿಕೆಯವರು ಸ್ವಾಧೀನಪಡಿಸಿಕೊಂಡು, ದಾವಾ ಆಸ್ತಿಯನ್ನು ವಾದಿಯ ತಂದೆ ಕೊಟ್ಟಿತ್ತು ಅಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಉತಾರದಲ್ಲಿ ಮೊದಲು ವಾದಿಯ ತಂದೆಯ ಹೆಸರು ಇತ್ತು. ಈಗ ವಾದಿಯ ಹೆಸರು ಇದೆ ಅಂದರೆ ಗೊತ್ತಿಲ್ಲ. ವಾದಿ ನನಗೆ ವ್ಯಾಪಾರ ಮಾಡಲು ದಾವಾ ಆಸ್ತಿ ಕೊಟ್ಟಿದ್ದರು ಅಂದರೆ ಗೊತ್ತಿಲ್ಲ. ನನ್ನ ಹೆಸರು ಟೆನೆಂಟ ಎಂದು ದಾಖಲಾಯಿತು ಅಂದರೆ ಗೊತ್ತಿಲ್ಲ. ರಶೀದಿಯಲ್ಲಿ ನನ್ನ ಹೆಸರನ್ನು ನೋಡಿಲ್ಲ. ಮಹಾನಗರ ಪಾಲಿಕೆಯವರು ಕರ ತುಂಬಿರಿ ಅಂತಾ ಹೇಳಿದ್ದಕ್ಕೆ ತುಂಬಿದ್ದೇವೆ.

**SC 70-24** **DW-1**

ಬಾಬುಜಾನ ಮುನ್ಸಿ ಪರಿಚಯ. ವಾದಿ ಬಾಬುಜಾನ ಮುನ್ಸಿ ಗೆಳೆಯರು ಅಂದರೆ ಗೊತ್ತಿಲ್ಲ. ವಾದಿ ನೋಟಿಸು ಕಳಿಸಿದ್ದರು ಅಂದರೆ ಸರಿ. ನಾವು ಅದಕ್ಕೆ ಉತ್ತರ ಕೊಟ್ಟಿಲ್ಲ. ದಾವಾ ಆಸ್ತಿಯ ದಾಖ್ಲೆಗಳಲ್ಲಿ ವಾದಿ ಹೆಸರು ಕೇಸ ಮಾಡಿದ ನಂತರ ಗೊತ್ತಾಗಿದೆ. ದಾವೆ ಸಲ್ಲಿಸಿದ ನಂತರ ವಾದಿ ಹೆಸರು ಹೇಗೆ ದಾಖಲಾಗಿದೆ ಅಂತಾ ಮಹಾನಗರ ಪಾಲಿಕೆಯಲ್ಲಿ ಕೇಳಿಲ್ಲ. ವಾದಿ ಯಾವ ಯಾವ ದಾಖಲೆಗಳನ್ನು ಹಾಜರಪಡಿಸಿದ್ದಾರೆ ಅಂತಾ ಗೊತ್ತಿಲ್ಲ. 2002 ರಲ್ಲಿ ನಮ್ಮ ವ್ಯಾಪಾರದಿಂದ ತೊಂದರೆಯಾಗುತ್ತಿದೆ ಅಂತಾ ಅಕ್ಕ -ಪಕ್ಕದ ಜನರು ಪೋಲಿಸರಿಗೆ ದೂರು ನೀಡಿದ್ದಾರೆ ಅಂದರೆ ಸರಿಯಲ್ಲ. ಆ ಕಾಲಕ್ಕೆ ವಾದಿ ಜೊತೆಗೆ ಒಂದು ಕರಾರು ಪತ್ರ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಾನು ನಿಪಿ.4 ನ್ನು ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಈಗ ಸಾಕ್ಷಿಗೆ ದಾವಾ ಆಸ್ತಿ ನಕಾಶೆ ತೋರಿಸಲಾಗಿ ಅದನ್ನು ನೋಡಿಲ್ಲವೆಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿರುವ ಶೆಡ್ ನ್ನು ವಾದಿಗಳು ಹಾಕಿದ್ದಾರೆ ಅಂದರೆ ಸರಿಯಲ್ಲ.

4. ಮಹಾನಗರ ಪಾಲಿಕೆಯವರು ಪರವಾನಿಗೆ ಕೊಟ್ಟ ನಂತರ ನಾವು ಶೆಡ್ ಹಾಕಿದ್ದೇವೆ. ಅದರ ಪರವಾನಿಗೆ ಹಾಜರಪಡಿಸಲು ತೊಂದರೆ ಇಲ್ಲ. ಈಗ ವಾದಿಗಳಿಗೆ ಕೊಟ್ಟ ಪರವಾನಿಗೆ ಪತ್ರ ತೋರಿಸಲಾಗಿ ಅದರ ಬಗ್ಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಮಹಾನಗರ ಪಾಲಿಕೆಯವರು ಕರ ಸಂಬಂಧಪಟ್ಟಂತೆ ಡಿಮಾಂಡ ನೋಟಿಸು ಕಳಿಸಿಲ್ಲ. 2022 ರಲ್ಲಿ ಮಹಾನಗರ ಪಾಲಿಕೆಯವರು ಜಪ್ತ ಮಾಡಲು ಬಂದಿಲ್ಲ. ನಾವು ಕರ ಪಾವತಿ ಮಾಡಿದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ನಾನು ಆ ಕುರಿತು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಒಟ್ಟು 1 ಲಕ್ಷ 60 ಸಾವಿರ ರೂ. ಕರ ಇತ್ತು. 71 ಸಾವಿರ ರೂ. ಚೆಕ್ ಮೂಲಕ ಕೊಟ್ಟಿದ್ದೇನೆ. ವಾದಿ ಜೊತೆಗೆ ಪ್ರತಿ ತಿಂಗಳು ಭೂ-ಭಾಡಿಗೆ 1 ಸಾವಿರ ರೂ. ಕೊಡಬೇಕು ಹಾಗೂ ಕರ ಕಟ್ಟಬೇಕೆಂದು ಒಪ್ಪಂದವಾಗಿತ್ತು ಅಂದರೆ ಸರಿಯಲ್ಲ. ವಾದಿಯ ತಂದೆಗೆ ದಾವಾ ಆಸ್ತಿ ಕೊಟ್ಟ ಬಗ್ಗೆ ನನಗೆ ಗೊತ್ತಿದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2020 ರಿಂದ ಭಾಡಿಗೆ ಕೊಟ್ಟಿಲ್ಲ ಅಂದರೆ ಅವರು ನಮಗೆ ಸಂಬಂಧವಿಲ್ಲವೆಂದದು ಹೇಳುತ್ತಾರೆ. ನಾನು ಜಮಾತಿಗೆ ಹೋಗಿಲ್ಲ. ಜಮಾತಿನವರು ಆಸ್ತಿ ಬಿಟ್ಟುಕೊಡಿ ಅಂತಾ ಹೇಳಿದ್ದರು ಅಂದರೆ ಸರಿಯಲ್ಲ.

**SC 70-24** **DW-1**

ಬಾಬುಜಾನ ಮುನ್ಸಿರವರು ಮರಣ ಹೊಂದಿದ್ದು ಗೊತ್ತಿಲ್ಲ. ವಾದಿ ಆಸ್ತಿ ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಬಿಡಬಾರದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.